# ದಿನಾಂಕ 28.07.2009 ರಂದು ಜರುಗಿದ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, (ವೈದ್ಯಕೀಯ ಶಿಕ್ಷಣ), ವಿಧಾನ ಸೌಧ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ಜರುಗಿದ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 3ನೇ ಹಣಕಾಸು ಸಮಿತಿ ಸಭೆಯ ನೆಡುವಳಿಗಳು.

## ಸಭೆಯಲ್ಲಿ ಹಾಜರಿದ್ದ ಸದಸ್ಯರು.

| | | |
|---|---|---|
| 1. ಶ್ರೀ ವಿ. ಉಮೇಶ್, ಭಾ.ಆ.ಸೇ<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, (ವೈ.ಶಿ),<br>ಬೆಂಗಳೂರು. | : | ಅಧ್ಯಕ್ಷರು |
| 2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,<br>ಅರ್ಥಿಕ ಇಲಾಖೆ, ಬೆಂಗಳೂರು | : | ಸದಸ್ಯರು |
| 3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು<br>ಯೋಜನಾ ಇಲಾಖೆ, ಬಹುಮಹಡಿ ಕಟ್ಟಡ,<br>ಬೆಂಗಳೂರು. | : | ಸದಸ್ಯರು |
| 4. ಶ್ರೀ ಅನೀಸ್ ಸಿರಾಜ್, ಕೆ.ಎ.ಎಸ್<br>ಸರ್ಕಾರದ ಅಪರ ಕಾರ್ಯದರ್ಶಿಗಳು,<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,<br>ಬೆಂಗಳೂರು. | : | ಸದಸ್ಯರು |
| 5. ಡಾ. ಅರುಣಾ<br>ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ<br>ಆನಂದರಾವ್ ವೃತ್ತ, ಬೆಂಗಳೂರು. | : | ಸದಸ್ಯರು |
| 6. ಡಾ. ರಾಮಯ್ಯ,<br>ನಿರ್ದೇಶಕರು,<br>ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,<br>ರಾಯಚೂರು. | : | ಸದಸ್ಯರು |
| 7. ಶ್ರೀ ಶಿವ ಕುಲಕರ್ಣಿ, ಕ.ಸ.ಸೆ,<br>ಮುಖ್ಯ ಆಡಳಿತಾಧಿಕಾರಿಗಳು,<br>ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,<br>ರಾಯಚೂರು. | : | ಸದಸ್ಯರು |

ಸಭೆಯ ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು. ಅಜೆಂಡವಾರು ವಿಷಯಗಳನ್ನು ಚರ್ಚಿಸಲಾಯಿತು.

1) **ವಿಷಯ ಸಂಖ್ಯೆ 1:** ವಿಷಯ ಸಂಖ್ಯೆಯ 1 ರಲ್ಲಿ 2ನೇ ಹಣಕಾಸು ಸಮಿತಿ 22.09.2007 ರಂದು ಜರುಗಿದ್ದು ತದ ನಂತರ ಇಂದಿನವರೆಗೆ ಎರಡು ವರ್ಷಗಳಲ್ಲಿ ಒಂದೂ ಹಣಕಾಸು ಸಭೆಯನ್ನು ಜರುಗಿಸಿಲ್ಲ, ಇದು ಸರಿಯಾದ ಕ್ರಮವಲ್ಲ, ಸಂಸ್ಥೆಯ ನಿಯಮ ಮತ್ತು ಬೈಲಾಗಳ ಪ್ರಕಾರ ಪ್ರತಿ ಮೂರು ತಿಂಗಳಿಗೊಮ್ಮ (ಚತುರ್ಮಾಸಿಕ ಅವಧಿಗೆ) ಒಂದು ಸಲದಂತೆ ವರ್ಷಕ್ಕೆ ಕನಿಷ್ಟ ನಾಲ್ಕು ಹಣಕಾಸು ಸಭೆಯನ್ನು ಜರುಗಿಸಬೇಕಾಗಿದೆ. ಈ ರೀತಿ ವಿಳಂಬವಾಗಿ ಸಭೆ ಜರುಗಿಸುವುದನ್ನು ಮತ್ತು ಸಭೆ ಜರುಗಿಸದೇ ಇರುವುದನ್ನು ಅಕ್ಷೇಪಿಸಿ ಮುಂದೆ ಈ ರೀತಿ ಮಾಡಬಾರದಂತೆ ಸಂಸ್ಥೆಯ ಆಡಳಿತ ವರ್ಗಕ್ಕೆ ನಿರ್ದೇಶನ ನೀಡಲಾಯಿತು. ದಿನಾಂಕ 22.09.2007ರಂದು ಜರುಗಿದ ಎರಡನೇ ಹಣಕಾಸು ಸಮಿತಿಯ ನಡುವಳಿಗಳನ್ನು ಓದಿ ಈ ಕುರಿತು ಸಲ್ಲಿಸಿದ. ಅನುಪಾಲನ ವರದಿಯನ್ನು ಈ ಕೆಳಗೆ ವಿವರಿಸಿ ಅಂಶಗಳ ಜೊತೆಗೆ ಅನುಮೋದಿಸಿದೆ.

ಕ್ರಮ ಸಂಖ್ಯೆ 5ರಲ್ಲಿ 01.05.2009ರಂದು ಟೆಂಡರ್ ಮುಖಾಂತರ ಸ್ವಚ್ಛತೆ ಮತ್ತು ಭದ್ರತೆ ಕೆಲಸಗಳಿಗೆ ಹೊರಗುತ್ತಿಗೆ ನೀಡಿದ ಬಗ್ಗೆ ಸಂಸ್ಥೆಯ ವೃಂದ ಬಲ, ಎಂ.ಸಿ.ಐ ಮತ್ತು ಸರ್ಕಾರದಿಂದ ಮಂಜೂರಾದ ಹುದ್ದೆಗಳು ಮತ್ತು ಈ ಹೊರಗುತ್ತಿಗೆಯ ಸಕ್ರಿಯೆಗಳನ್ನು ನಿಯಾಮಾನುಸಾರ ಮತ್ತು ಪಾರದರ್ಶಕವಾಗಿ ಕೈಗೊಂಡ ಕ್ರಮ ಕುರಿತು ಸವಿಸ್ತಾರವಾದ ವಿವರವನ್ನು ಪುನ: ಸಲ್ಲಿಸಲು ಸೂಚಿಸಲಾಗಿದೆ.

2) **ವಿಷಯ ಸಂಖ್ಯೆ 2:** ಲೆಕ್ಕ ಪರಿಶೋಧನ ವರದಿಯನ್ನು ಪರಿಶೀಲಿಸಲಾಯಿತು, ಸದರಿ ವರದಿಯನ್ನು ಹಾನಿಯೆಂದು ತೋರಿಸಲಾಗಿದ್ದು ಹಾನಿ ಎಂಬ ಪದದ ಬದಲು ಆದಾಯಕ್ಕಿಂತ ಹೆಚ್ಚಿನ ವೆಚ್ಚವೆಂದು ನಮೂದಿಸಬೇಕು, ಬ್ಯಾಲೆನ್ಸ್ ಸೀಟ್‌ನಲ್ಲಿ ಜಾಯಿಂಟ್ ಡೈರೆಕ್ಟರ್, ಬೆಂಗಳೂರು ಎನ್ನುವ ಬದಲು ಸರ್ಕಾರದಿಂದ ಸಂಸ್ಥೆಗೆ ಅನುದಾನವೆಂದು ನಮೂದಿಸಬೇಕು.

ಈ ತೆಖ್ತೆಗಳ ಜೊತೆಗೆ ಸಂಸ್ಥೆಯ ಆಸ್ಥಿ ವಿವರಗಳ ತೆಖ್ತೆ ಹಾಗು ಸರ್ಕಾರದ ಪದ್ದತಿಯೆಂತೆ ನಿಗದಿತ ನಮೂನೆಯಲ್ಲಿ ತೆಖ್ತೆಗಳನ್ನು ಸಲ್ಲಿಸಲು ಸೂಚಿಸಿ ಈ ಅಂಶಗಳೊಂದಿಗೆ 2008-09ನೇ ಸಾಲಿನ ಮತ್ತು 2009-10ನೇ ಸಾಲಿನ (30.06.2009ರವರೆಗೆ) ಆದಾಯ ವೆಚ್ಚ ಮತ್ತು ಹಣಕಾಸಿನ ತೆಖ್ತೆಗಳ ಲೆಕ್ಕಪರಿಶೋಧನ ವರದಿಯನ್ನು ಅನುಮೋದಿಸಿದೆ.

3) <u>ವಿಷಯ ಸಂಖ್ಯೆ 3</u> : ಸಾಧನ ಸಲಕರಣೆಗಳ ವೆಚ್ಚವನ್ನು ಪರಿಶೀಲಿಸಲಾಗಿ ದಿನಾಂಕ 01.04.2008 ರಿಂದ 31.08.2009 ರವೆರೆಗೆ ಮತ್ತು 13.09.2008 ರಿಂದ 30.06.2009ರವೆರೆಗೆಯೆಂದು ಎರಡು ಭಾಗ ಮಾಡಿ ಸಲ್ಲಿಸಿದ ಪಟ್ಟಿಯು ಸರಿಯಿಲ್ಲ, ಈಡೀ ವರ್ಷಕ್ಕೆಂದು ಕ್ರೋಢಿಕೃತ ಖರೀದಿ ಪಟ್ಟಿಯ ವಿವರಗಳನ್ನು ತಯಾರಿಸಿ ಸಲ್ಲಿಸತಕ್ಕದ್ದು. ಹಾಗು ವಿಷಯ ಪೂರ್ವ ಈ ಕೆಳಗೆ ವಿವರಿಸಿದಂತೆ ಮಾಹಿತಿಯನ್ನು ಸಿದ್ದಪಡಿಸಿ ಸಲ್ಲಿಸಲು ಸೂಚಿಸಿದೆ.

ಅ) ಕ್ರಮ ಸಂಖ್ಯೆ 2) ತಾಂತ್ರಿಕ ಸಮಿತಿ ಸಲಹೆ 3) ಉಪಕರಣದ ವಿವರಗಳು 4) ಟೆಂಡರ್ ಮಾಹಿತಿ, ಟೆಂಡರ್ ದಿನಾಂಕ ಮತ್ತು ತಾಂತ್ರಿಕ ವರದಿ 5) ಹಣಕಾಸು ಪರಿಶೀಲನಾ ವರದಿಗಳನ್ನು ನಮೂದಿಸಿ ಪಟ್ಟಿ ಮಾಡಿ ಸರಿಯಾಗಿ ಸಲ್ಲಿಸುವಂತೆ ಸೂಚಿಸಲಾಯಿತು.

ಆ) ಚುನಾವಣೆ ಪ್ರಯುಕ್ತ ನೀತಿ ಸಂಹಿತೆ ಜಾರಿ ಇದ್ದುದರಿಂದ ಟೆಂಡರ್‌ನ್ನು ಕರೆಯದೆ ಇತರ ಸಂಸ್ಥೆಗಳು ಅಂದರೆ ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥ, ಹಾಸನ ಮತ್ತು ಇತರ ಸಂಸ್ಥೆಗಳಿಂದ ಖರೀದಿಸಿದ ಮಾದರಿಯನ್ನು ಖರೀದಿ ಮಾಡಿದ್ದು ಈ ಬಗ್ಗೆ ಈ ಸಂಸ್ಥೆಗಳ ವರದಿ ಲಗತ್ತಿಸಿರಲಿಲ್ಲ. ಮತ್ತು ಕೇಂದ್ರ ಸರ್ಕಾರದ good Officer Committee ನಿಯಮಗಳನ್ನು ಲಗತ್ತಿಸಿರಲಿಲ್ಲ ಇವುಗಳ ಪ್ರಕಾರ ಖರೀದಿ ಪಟ್ಟಿಯನ್ನು ಪುನ: ತಯಾರಿಸಿ ಸಲ್ಲಿಸುವಂತೆ ಸೂಚಿಸಿದೆ.

4) <u>ವಿಷಯ ಸಂಖ್ಯೆ 4</u> : 2009-10ನೇ ಸಾಲಿನ ಆಯವ್ಯಯ (ಬಜೆಟ್) ಪ್ರತಿಯನ್ನು ಪರಿಶೀಲಿಸಲಾಯಿತು. ಕ್ರಮ ಸಂಖ್ಯೆ 3 & 4 ಸಲಕರಣೆಗಳು, ವೇತನ ಮತ್ತು ಕಛೇರಿ ವೆಚ್ಚಗಳ ಸೂಚಿತ ಮೊತ್ತಕ್ಕೆ ಅನುಮೋದನೆ ನೀಡಿ ಕ್ರಮ ಸಂಖ್ಯೆ 1 & 2 ರಲ್ಲಿ ಉದ್ದೇಶಿತ ಕಾಮಗಾರಿಗಳ ಕುರಿತು ಸರ್ಕಾರದ ಆದೇಶದ ಪ್ರಕಾರ ಮಂಜೂರಿಯಾದ ಮೊತ್ತಕ್ಕೆ ಅನುಗುಣವಾಗಿ ವಾರ್ಷಿಕ ಆಯವ್ಯಯಕ್ಕೆ ಅನುಮತಿ ನೀಡಲಾಯಿತು. ಈ ಕಟ್ಟಡಗಳ ಕಾಮಗಾರಿ ಕುರಿತು ಸ್ಥಳಿಯ ಕಾಮಗಾರಿ ಸಭೆಯ ಸಮಿತಿ ಸಭೆ ಕರೆದು ಅದರಲ್ಲಿ ವಾಸ್ತವಿಕವಾಗಿ ಬೇಕಾಗಿರುವ ಕಾಮಗಾರಿಗಳ ಪಟ್ಟಿಯನ್ನು ಮಾಡಿ ಅನಾವಶ್ಯಕವಾದಂತಹ ಕಾಮಗಾರಿ ತೆಗೆದು ಹಾಕಿ ಅವಶ್ಯವಿರುವ ಕಾಮಗಾರಿ ಮಾತ್ರ ತೆಗೆದುಕೊಂಡು ಹಾಗು ಈ ವೆಚ್ಚವು ಹೆಚ್ಚಾಗದಂತೆ ನೋಡಿಕೊಳ್ಳಲು ಸೂಚಿಸಲಾಯಿತು. ವಾಸ್ತವವಾಗಿ ಬಂಡವಾಳ, ವೆಚ್ಚ, ಕಟ್ಟಡ, ಪೀಠೋಪಕರಣ, ಸಲಕರಣೆ, ರಸಾಯನಿಕ ಮತ್ತು ಉಪಯೋಗಿ ವಸ್ತುಗಳ ವೆಚ್ಚ, ಬೇಡಿಕೆಗಳು ಮತ್ತು ಸಿಬ್ಬಂದಿ ವೆಚ್ಚಗಳ ಕುರಿತು ಈಗಾಗಲೇ ಮಾಡಿದ ವೆಚ್ಚಗಳನ್ನು ನಮೂದಿಸಿ ಉದ್ದೇಶಿತ ಆಯವ್ಯಯಕ್ಕೆ ಒಪ್ಪಿಗೆ ನೀಡಿದೆ.

5) <u>ವಿಷಯ ಸಂಖ್ಯೆ 5</u> : ಈಗಾಗಲೇ ಮುಕ್ತಾಯಗೊಂಡ ಕಾಮಾಗಾರಿಗಳನ್ನು ಪರಿಶೀಲಿಸಿ ವಿವರ ಈ ಕೆಳಗಿನಂತಿದೆ.
ಕಾಮಗಾರಿಗೆ 1ನೇ ಹಂತದಲ್ಲಿ ಅಂದಾಜು ಮೊತ್ತ 20 ಕೋಟಿ, ವಾಸ್ತವ ವೆಚ್ಚ 28 ಕೋಟಿ, 2ನೇ ಹಂತದಲ್ಲಿ ಅಂದಾಜು ಮೊತ್ತ 40 ಕೋಟಿ, ವಾಸ್ತವ ವೆಚ್ಚ 48 ಕೋಟಿ ಒಟ್ಟು ಕಾಮಗಾರಿಗೆ ಅಂದಾಜು ಮೊತ್ತ 60 ಕೋಟಿ, ವಾಸ್ತವ ವೆಚ್ಚ 74 ಕೋಟಿ ವೆಚ್ಚವಾಗಿ 14 ಕೋಟಿ ಹೆಚ್ಚುವರಿ ಖರ್ಚಾದ ಬಗ್ಗೆ ವಿವರವಾದ ವರದಿ ಸಲ್ಲಿಸಲು ಸೂಚಿಸಲಾಯಿತು. 7,75,441 ಚದರಡಿ ಕಟ್ಟಡ ಕಟ್ಟಲಾಗಿದ್ದುನ್ನು ಇದಕ್ಕೆ ಒಟ್ಟು ರೂ. 82 ಕೋಟಿ ವೆಚ್ಚವಾಗಿರುತ್ತದೆ. ಈ ಸಂಸ್ಥೆಯ ಕಾಲೇಜಿನ ಹೊಸ ಆಸ್ಪತ್ರೆಯ ಹಳೆಯ ಆಸ್ಪತ್ರೆಯ ಮತ್ತು ಓಪೆಕ್ ಆಸ್ಪತ್ರ ಸೇರಿ ಒಟ್ಟು 130 ಎಕರೆ ಜಮೀನನ್ನು ಹೊಂದಿದ್ದು ಇವುಗಳ ಕುರಿತು ಜಮೀನಿನ ದಾಖಲಾತಿಗಳನ್ನು ಮತ್ತು ಕಟ್ಟಡದ ದಾಖಲಾತಿಗಳನ್ನು ವ್ಯವಸ್ಥಿತವಾಗಿ ಹೊಂದಲು ಸೂಚಿಸಲಾಯಿತು. ವಿದ್ಯಾರ್ಥಿಗಳಿಗೆ ಪ್ರಸ್ತುತ ವರ್ಷದ ವ್ಯಾಸಂಗಕ್ಕೆ ಸ್ಥಳವಾಕಾಶವಿರುವುದನ್ನು ನಿರ್ದೇಶಕರು ಸಭೆಗೆ ತಿಳಿಸಿದರು. ವೆಚ್ಚವನ್ನು ಪರಿಶೀಲಿಸಲಾಗಿ ಒಂದನೇ ಹಂತಕ್ಕೆ 20 ಕೋಟಿ ಅಂದಾಜು ವೆಚ್ಚಕ್ಕೆ 28 ಕೋಟಿ ವೆಚ್ಚವನ್ನು ಮತ್ತು ಎರಡನೇ ಹಂತಕ್ಕೆ 40 ಕೋಟಿ ಅಂದಾಜು ವೆಚ್ಚಕ್ಕೆ 48 ಕೋಟಿ ವೆಚ್ಚವಾದದ್ದನ್ನು ಗಮನಿಸಿ ಈ ಬಗ್ಗೆ ಹಾಜರಿದ್ದ ಲೋಕೋಪಯೋಗಿ ಇಲಾಖೆ ಕಾರ್ಯಪಾಲಕ ಅಭಿಯಂತರರು ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರು ಕಾಮಗಾರಿ ಗುಣಮಟ್ಟದ್ದು ಹಾಗು ವೆಚ್ಚದ ಕುರಿತು ಹೆಚ್ಚಳಕ್ಕೆ ಕಾಮಗಾರಿಯ ವ್ಯತ್ಯಾಸ ಹಾಗು ಇತರ ಮಾಹಿತಿಯು ನಿಯಮದ ಪ್ರಕಾರ ಇರುವುದಾಗಿ ವಿವರಣೆಗಳನ್ನು ನೀಡಿದರು. ಆದರೆ ಸಭಾಧ್ಯಕ್ಷರು ಸದರಿ ಕಾಮಗಾರಿ ಗುಣಾತ್ಮಕವಾಗಿರುವ ಬಗ್ಗೆ ಮತ್ತು ವೆಚ್ಚಗಳು ಹೆಚ್ಚಾಗಿರುವುದಕ್ಕೆ ಕಾರಣಗಳನ್ನು ಪರಿಶೀಲಿಸಲು ಸ್ಥಳಿಯ ಕಟ್ಟಡ ಕಾಮಗಾರಿ ಸಭೆ ಕರೆದು ಪರಿಶೀಲನೆ ಮಾಡಿ ವರದಿ ಸಲ್ಲಿಸುವಂತೆ ಸೂಚಿಸಿದರು ಈ ಬಗ್ಗೆ ವರದಿ ಸಲ್ಲಿಸಲು ಮತ್ತು ಆಡಳಿತ ಮಂಡಳಿಯಲ್ಲಿ ಮಂಡಿಸಲು ಸೂಚಿಸಲಾಯಿತು.

6) <u>ವಿಷಯ ಸಂಖ್ಯೆ 6</u> : ಕಾಲೇಜು ಕಟ್ಟಡಕ್ಕೆ ಮತ್ತು ಆಸ್ಪತ್ರೆಯ ಕಟ್ಟಡಕ್ಕೆ ಎಂ.ಸಿ.ಐ ನಿಯಮಗಳ ಪ್ರಕಾರ ಅಗತ್ಯವಿರುವ ಕಾಮಗಾರಿಗಳನ್ನು ಪಟ್ಟಿ ಮಾಡಿ ಅದರಂತೆ ಕಾಲೇಜಿಗೆ 95.00 ಕೋಟಿ ಮತ್ತು ಆಸ್ಪತ್ರೆಗೆ 130.00 ಕೋಟಿ ಉದ್ದೇಶಿತ ಮೊತ್ತವನ್ನು ಪರಿಶೀಲಿಸಲಾಯಿತು. ಈ ಪಟ್ಟಿಯಲ್ಲಿ ಸಂಸ್ಥೆಯ ಒಟ್ಟಾರೆ ಜಮೀನಿನ ನಕ್ಷೆ ಮಾಡಿ ಅವಶ್ಯಕತೆ ಮತ್ತು ಉಪಯೋಗ ಹಾಗು ಅಚ್ಚು ಕಟ್ಟಾಗಿ ಕಾಲೇಜು ಮತ್ತು ಆಸ್ಪತ್ರೆ ಹೊಂದಲು ನಕ್ಷೆ ಮತ್ತು ಯೋಜನೆ ತಯಾರಿಸಿ ಅದಕ್ಕೆ ಅನುಮೋದನೆ ಪಡೆಯತಕ್ಕದ್ದು. ಉದ್ದೇಶಿತ ಕಟ್ಟಡಗಳಲ್ಲಿ ಕಾಮಗಾರಿಗೆ ಅವಶ್ಯವಿರುವ ಕಟ್ಟಡಗಳನ್ನು ಮಾತ್ರ ಕಟ್ಟತಕ್ಕದ್ದು. ವೃತ್ತಿ ಪರತೆ ಮತ್ತು ಗುಣಾತ್ಮಕ ಶೈಲಿಯ ಕಾಮಗಾರಿಗಳನ್ನು ಹೊಂದತಕ್ಕದ್ದು. ವೆಚ್ಚ ಹೆಚ್ಚಳಕ್ಕೆ ಅವಕಾಶ ಕೊಡಬಾರದು ಈ ಎಲ್ಲಾ ಅಂಶಗಳನ್ನು ಒಳಗೊಂಡು ಯೋಜನೆ ಸಿದ್ದ ಪಡಿಸಿ ಸ್ಥಳೀಯ ಕಾಮಗಾರಿ ಸಭೆಯಲ್ಲಿ ಮಂಡಿಸಿ ಪುನ: ಸಲ್ಲಿಸಲು ಸೂಚಿಸಲಾಯಿತು. ಸಿಬ್ಬಂದಿಗಳಿಗೆ ಬೇಕಾಗುವ ಕಟ್ಟಡಗಳ ಕುರಿತು ಸ್ಥಳಿಯ ನಗರಾಭಿವೃದ್ಧಿ ಮತ್ತು ಗೃಹ ನಿರ್ಮಾಣ ಮಂಡಳಿಯ ಸೌಲಭ್ಯಗಳನ್ನು ಪಡೆಯಲು ಸೂಚಿಸಿ ವೆಚ್ಚ ಕಡಿವಾಣಕ್ಕೆ ಹಾಗು ಗುಣಾತ್ಮಕ ಕಾಮಗಾರಿಗಳಿಗೆ ಸೂಚಿಸಲಾಯಿತು.

7) **ವಿಷಯ ಸಂಖ್ಯೆ 7 :** ಎಂ.ಸಿ.ಐ ಕರಾರು ಪ್ರಕಾರ ಅವಶ್ಯವಿರುವ ಉಪಕರಣಗಳ ಪಟ್ಟಿಯನ್ನು ಪರಿಶೀಲಿಸಲಾಯಿತು. ಇವುಗಳ ಪೂರ್ಣ ವಿವರಗಳ ಪಟ್ಟಿ ಸಿದ್ದ ಪಡಿಸಲು ಸೂಚಿಸಲಾಯಿತು. ಇವುಗಳನ್ನು ನಿಯಾಮಾನುಸಾರ ಟೆಂಡರ್ ಕರೆದು ಪಾರದರ್ಶಕ ಕಾಯ್ದೆಯೆಡಿ ಮತ್ತು ಖರೀದಿ ಸಮಿತಿ ಕರೆದು ನಿಯಾಮಾನುಸಾರ ತೀರ್ಮಾನ ಕೈಗೊಂಡು ಖರೀದಿಸಲು ಅನುಮತಿ ನೀಡಲಾಗಿದೆ.

8) **ವಿಷಯ ಸಂಖ್ಯೆ 8 :** ಅಧ್ಯಕ್ಷರ ಅಪ್ಪಣೆ ಮೇರೆಗೆ ಈ ಕೆಳಕಂಡ ವಿಷಯಗಳನ್ನು ಚರ್ಚಿಸಿ ನಿರ್ಣಯಿಸಲಾಯಿತು.

1) ಎಂ.ಸಿ.ಐ ಸರ್ಕಾರದ ಮಂಜೂರಿಯ ಅನುಸಾರ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯ ಕೊರತೆಯನ್ನು ಪರಿಹರಿಸಿಕೊಳ್ಳಲು ನಿಯಮಾನುಸಾರ ಅಡಳಿತ ಮಂಡಳಿಯ ಒಪ್ಪಿಗೆ ಪಡೆದು ನೇಮಕಾತಿ ಮಾಡಲು ಹಾಗು ವರದಿ ಸಲ್ಲಿಸಲು ಸೂಚಿಸಲಾಯಿತು.

2) ಆಸ್ತಿ ಮತ್ತು ಕಟ್ಟಡಗಳು ಹಾಗೂ ಖರೀದಿಸಿದ ಉಪಕರಣಗಳು ಈ ಬಗ್ಗೆ ಸರ್ಕಾರದಿಂದ ಅನುದಾನ ಮತ್ತು ವೆಚ್ಚಗಳನ್ನು ವಿವರ ಸಲ್ಲಿಸಲು ಸೂಚಿಸಲಾಯಿತು.

3) ಎಂ.ಸಿ.ಐ ನಿಯಮಾನುಸಾರ ಅವಶ್ಯವಿರುವ ಮತ್ತು ಬರುವ ವರ್ಷದ ಅಗತ್ಯವಿರುವ ಕ್ರಮಗಳನ್ನು ಕುರಿತು ವರದಿ ಸಲ್ಲಿಸಲು ಹಾಗೂ ಕ್ರಮಕ್ಕೆ ಸೂಚಿಸಲಾಯಿತು.

4) ರಾಯಚೂರಿನಲ್ಲಿರುವ ಓಪೆಕ್ ಆಸ್ಪತ್ರೆಯನ್ನು ಅಪೋಲೋ ಖಾಸಗಿ ಸಂಸ್ಥೆಗೆ 2001 ಜುಲೈನಲ್ಲಿ ಗುತ್ತಿಗೆ ನೀಡಲಾಗಿದ್ದು ಇದನ್ನು ವಾಪಸ್ ಪಡೆಯಲು ಕರಾರುಗಳ ಪ್ರಕಾರ ಮೂರು ತಿಂಗಳ ನೋಟಿಸ್, ಅವಶ್ಯವಿದ್ದಲ್ಲಿ ಆ ರೀತಿ ಕ್ರಮ ಕೈಗೊಂಡು ಸಂಸ್ಥೆಯಲ್ಲಿ ವಿಲೀನಿಕರಣ ಗೊಳ್ಳಲು ಕ್ರಮಕ್ಕೆ ಸೂಚಿಸಲಾಯಿತು.

ಕೊನೆಗೆ ವಂದನಾರ್ಪಣೆಗಳೊಂದಿಗೆ ಹಣಕಾಸು ಸಭೆಯು ಮುಕ್ತಾಯವಾಯಿತು.

(signature) 18/7/09

(ಶ್ರೀ ವಿ. ಉಮೇಶ್)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, (ವೈ.ಶಿ),
ಬೆಂಗಳೂರು.